## ಕಾರ್ಯಕಾರಿ ಸಾರಾಂಶ

ಅಧ್ಯಯನ ಮಾದರಿ ಬಗ್ಗೆ

- ಈ ಅಧ್ಯಯನವು ಕೋವಿಡ್- 19 ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ಭಾರತದ ನಾಲ್ಕು ರಾಜ್ಯಗಳಾದ ಬಿಹಾರ, ಕರ್ನಾಟಕ, ಮಹಾರಾಷ್ಟ್ರ, ಮಧ್ಯಪ್ರದೇಶದ ಎಂಟು ಬ್ಲಾಕ್‌ಗಳಲ್ಲಿ ಮನರೇಗಾದ ಕಾರ್ಯಚಟುವಟಿಕೆಯ ಬಗ್ಗೆ ಪರಿಶೀಲಿಸುತ್ತದೆ.

- ಮನರೇಗಾ ಕಾರ್ಯಚಟುವಟಿಕೆಯನ್ನು ಈ ಕೆಳಗಿನ ಆಯಾಮಗಳಲ್ಲಿ ವಿಶ್ಲೇಷಿಸಬಹುದಾಗಿದೆ: ಉದ್ಯೋಗ ಕಾರ್ಡ್ ಹೊಂದಿರುವ ಮನೆಗಳಲ್ಲಿ ಕಾರ್ಯಕ್ರಮದ ಒಟ್ಟಾರೆ ಅನುಭವವನ್ನು ಗಮನಿಸುವುದು, ಅಗತ್ಯವಿದ್ದಷ್ಟು ಕೆಲಸ ಸಿಗಬೇಕೆಂಬ ಬೇಡಿಕೆ ಈಡೇರದೆ ಇರುವುದು, ವೇತನ ಪಾವತಿಯಲ್ಲಿ ಸಮಸ್ಯೆ, ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ಕಾರ್ಯಕ್ರಮದ ಚಟುವಟಿಕೆಯಲ್ಲಿ ಬದಲಾವಣೆ ಮತ್ತು ಮನರೇಗಾವು ಸುರಕ್ಷಾ ಜಾಲವಾಗಿ ಎಷ್ಟು ಪರಿಣಾಮಕಾರಿಯಾಗಿತ್ತು ಎಂದು ತಿಳಿದುಕೊಳ್ಳುವ ಪ್ರಯತ್ನವಾಗಿದೆ.

- ಮನರೇಗಾ ಒಕ್ಕೂಟದ ಜೊತೆಗೆ ಕೆಲಸ ಮಾಡುತ್ತಿರುವ ನಾಗರಿಕ ಸಮಾಜದ ಸಂಘಟನೆಗಳು ಭಾಗವಾಗಿರುವ ಬ್ಲಾಕ್‌ಗಳ ಪಟ್ಟಿಯಿಂದ ಬ್ಲಾಕ್‌ಗಳನ್ನು ಆರಿಸಲಾಗಿದೆ. ಮ್ಯಾನೇಜ್‌ಮೆಂಟ್ ಇನ್‌ಫಾರ್ಮೇಶನ್ ಸಿಸ್ಟಮ್ (ಎಂಐಎಸ್)ನಲ್ಲಿ ಪ್ರತಿಫಲಿಸಿರುವ ಪ್ರಕಾರ ಪಟ್ಟಿಯಲ್ಲಿರುವ ಎಲ್ಲಾ ಬ್ಲಾಕ್‌ಗಳಿಗೆ ಮನರೇಗಾ ಕಾರ್ಯಚಟುವಟಿಕೆಯ ಆಧಾರದಲ್ಲಿ ಶ್ರೇಯಾಂಕ ನೀಡಲಾಗಿದೆ. ಅತ್ಯಧಿಕ ಮತ್ತು ಅತಿ ಕಡಿಮೆ ಶ್ರೇಯಾಂಕ್ ಬ್ಲಾಕ್‌ಗಳನ್ನು ಪ್ರತೀ ರಾಜ್ಯದಲ್ಲಿ ಆರಿಸಲಾಗುತ್ತದೆ ಮತ್ತು ಅವುಗಳನ್ನು ಅಧಿಕ ಕಾರ್ಯನಿರ್ವಹಿಸುವ ಮತ್ತು ಕಡಿಮೆ ಕಾರ್ಯನಿರ್ವಹಿಸುವ ಬ್ಲಾಕ್‌ಗಳು ಎಂದು ಅಧ್ಯಯನದಲ್ಲಿ ಉಲ್ಲೇಖಿಸಲಾಗುತ್ತದೆ.

- ಆರಿಸಲಾಗಿರುವ ಬ್ಲಾಕ್‌ಗಳೆಂದರೆ- ಬಿಹಾರದ ಫುಲ್‌ಪರಸ್ (ಮಧುಬನಿ) ಮತ್ತು ಛಾತ್‌ಪುರ್ (ಸುಪೌಲ್), ಕರ್ನಾಟಕದ ಬೀದರ್ (ಬೀದರ್) ಮತ್ತು ದೇವದುರ್ಗ (ರಾಯಚೂರು), ಮಧ್ಯಪ್ರದೇಶದ ಖಾಲ್ವಾ (ಖಾಂಡ್ವಾ) ಮತ್ತು ಘಾಟಿಗಾಂವ್ (ಗ್ವಾಲಿಯರ್), ಮಹಾರಾಷ್ಟ್ರದಲ್ಲಿ ವಾರ್ಧಾ (ವಾರ್ಧಾ) ಮತ್ತು ಸುರ್ಗನ (ನಾಶಿಕ್).

- ಎರಡು ಹಂತದ ಯಾದೃಚ್ಛಿಕವಾಗಿ ಮಾದರಿಯನ್ನು ಈ ಬ್ಲಾಕ್‌ಗಳನ್ನು ಆರಿಸಲು ಅನುಸರಿಸಲಾಗಿದೆ. ಮೊದಲ ಹಂತದಲ್ಲಿ ಪ್ರತೀ ಬ್ಲಾಕ್‌ನಲ್ಲಿ 2011ರ ಜನಗಣತಿ ಪಟ್ಟಿಗೆ ಅನುಸಾರವಾಗಿ ಐದು ಗ್ರಾಮ ಪಂಚಾಯತ್‌ಗಳನ್ನು (ಜಿಪಿ) ಯಾದೃಚ್ಛಿಕವಾಗಿ ಆರಿಸಲಾಗಿದೆ. ಎರಡನೇ ಹಂತದಲ್ಲಿ 50 ಮನೆಗಳನ್ನು ಯಾದೃಚ್ಛಿಕವಾಗಿ ಉದ್ಯೋಗ ಕಾರ್ಡ್ ಹೊಂದಿರುವ ಮನರೇಗಾ ಎಂಐಎಸ್ ಪಟ್ಟಿಯಿಂದ ಪ್ರತೀ ಗ್ರಾಮ ಪಂಚಾಯತ್‌ನಿಂದ ಆರಿಸಲಾಗಿದೆ. ಮಾದರಿ ವಿಧಾನವು ಎಲ್ಲಾ ಬ್ಲಾಕ್ ಮಟ್ಟದ ಎಲ್ಲಾ ಉದ್ಯೋಗ ಕಾರ್ಡ್ ಹಿಡಿದಿರುವ ಮನೆಗಳ ಫಲಿತಾಂಶಗಳನ್ನು ಪ್ರತಿನಿಧಿಸುವುದನ್ನು ಖಚಿತಪಡಿಸಿದೆ.

- ಸಮೀಕ್ಷೆಯನ್ನು 2021 ನವೆಂಬರ್- ಡಿಸೆಂಬರ್‌ನಲ್ಲಿ ನಡೆಸಲಾಗಿದೆ. ಎರಡು ಉಲ್ಲೇಖ ಅವಧಿಗಳನ್ನು ನಿಯೋಜಿಸಲಾಗಿದೆ. ಮೊದಲಿಗೆ ಕೋವಿಡ್ ಪೂರ್ವ ವಿತ್ತೀಯ ವರ್ಷ (2019 ಏಪ್ರಿಲ್‌ನಿಂದ 2020 ಮಾರ್ಚ್) ಮತ್ತು ಎರಡನೇ ಸಂದರ್ಭದಲ್ಲಿ ಕೋವಿಡ್ ನಂತರದ ವಿತ್ತೀಯ ವರ್ಷ (2020 ಏಪ್ರಿಲ್‌ನಿಂದ 2021 ಮಾರ್ಚ್).

**ಕೋವಿಡ್- 19 ಪರಿಣಾಮ**

- ಅಧ್ಯಯನದಲ್ಲಿ ಸಂದರ್ಶಿಸಲಾಗಿರುವ ಮನೆಗಳು ಸಾಮಾನ್ಯ ಜನರಿಗಿಂತ ಹೆಚ್ಚು ದುರ್ಬಲವರ್ಗದವರು, ಕೆಳ ಜಾತಿಗಳಿಗೆ ಸೇರಿದವರು, ಭೂಮಿಯಿಲ್ಲದವರು ಹೆಚ್ಚಿನ ಪ್ರಮಾಣದಲ್ಲಿರುವುದು, ಕುಟುಂಬ ಆದಾಯ ಕಡಿಮೆ ಇರುವುದು ಹಾಗೂ ದಿನಗೂಲಿಯಂತಹ ಸಾಮಾನ್ಯ ಕೆಲಸ ಮಾಡುವವರಿಗೆ ಹೆಚ್ಚು ಪ್ರಾಶಸ್ತ್ಯ ನೀಡಲಾಗಿದೆ.

- ಸಮೀಕ್ಷೆ ನಡೆಸಿದ ಎಲ್ಲಾ ಬ್ಲಾಕ್‌ಗಳಲ್ಲಿ ನಾವು ಉದ್ಯೋಗ ಮತ್ತು ಆದಾಯದಲ್ಲಿ ದೊಡ್ಡ ಪ್ರಮಾಣದಲ್ಲಿ ನಕಾರಾತ್ಮಕ ಪರಿಣಾಮವನ್ನು ಗಮನಿಸಿದ್ದೇವೆ. ಬಹುತೇಕ ಮನೆಗಳು ಕೋವಿಡ್ ವರ್ಷದಲ್ಲಿ ಆದಾಯ ನಷ್ಟವನ್ನು ವರದಿ ಮಾಡಿದೆ. ಸರಾಸರಿ 30ಯಿಂದ ಶೇ. 50ರಷ್ಟು ಆದಾಯ ನಷ್ಟವನ್ನು ಪ್ರತೀ ಬ್ಲಾಕ್‌ಗಳಲ್ಲಿ ಕಳೆದುಕೊಂಡಿದ್ದರು.

- ಅಧ್ಯಯನ ನಡೆಸಿದ ಮೂರು ಬ್ಲಾಕ್‌ಗಳಲ್ಲಿ ಮಧ್ಯಪ್ರದೇಶದ ಖಾಲ್ವಾ ಮತ್ತು ಬಿಹಾರದ ಎರಡು ಬ್ಲಾಕ್‌ಗಳು ವಲಸೆ ಕಾರ್ಮಿಕರಿಂದ ಬರುವ ಹಣವು ಬಹುಪಾಲು ಮನೆಗಳ ಮುಖ್ಯ ಆದಾಯವಾಗಿತ್ತು. ಕೋವಿಡ್ ಪೂರ್ವದಲ್ಲಿ ಖಾಲ್ವಾದ ಮನೆಗಳ ಶೇ. 43ರಷ್ಟು ಆದಾಯವು ರೂ ಪ್ರತಿ ವರ್ಷ 37,800ರಷ್ಟಿತ್ತು. ಛಾತ್‌ಪುರ್‌ನಲ್ಲಿ ಕೋವಿಡ್‌ಗೆ ಮುನ್ನ ಶೇ. 50ರಷ್ಟು ಮನೆಗಳ ಆದಾಯ ಪ್ರತೀ ವರ್ಷ ಸುಮಾರು ರೂ 61,000ಗಳಷ್ಟಿತ್ತು. ಫುಲ್‌ಪರಸ್‌ನಲ್ಲಿ ಶೇ. 67ರಷ್ಟು ಮನೆಗಳ ಆದಾಯವು ಪ್ರತೀ ವರ್ಷ ರೂ 48,000ಗಳಷ್ಟಿತ್ತು.

- ಇತರ ಬ್ಲಾಕ್‌ಗಳು ತವರಿಗೆ ಮರಳಿದ ವಲಸಿಗರನ್ನು ಹೆಚ್ಚು ಪ್ರಮಾಣದಲ್ಲಿ ಹೊಂದಿರಲಿಲ್ಲ. ಆದರೆ ವಲಸಿಗ ಕಾರ್ಮಿಕರು ತವರಿಗೆ ಮರಳಿರುವ ಬಗ್ಗೆ ಹೆಚ್ಚು ವಿವರ ದಾಖಲಿಸದ (ಅಂದರೆ, ಕೋವಿಡ್ ಸಂದರ್ಭದಲ್ಲಿ ಮನೆಗೆ ಮರಳಿದ ವಲಸಿಗ ಕಾರ್ಮಿಕರು) ಮನೆಗಳು ತವರಿಗೆ ಮರಳುವ ಒತ್ತಡ ಎದುರಿಸಿದಂತಹ ಕಾರ್ಮಿಕರಿಂದ ಸರಾಸರಿ ವಾರ್ಷಿಕ ಆದಾಯವಾಗಿ ರೂ. 55,600ರಷ್ಟು ಗಳಿಸಿರುವುದಾಗಿ ಹೇಳಿದ್ದಾರೆ.

## ಮನರೇಗಾದ ಬಗ್ಗೆ ಒಟ್ಟು ಅಭಿಪ್ರಾಯ

- ಕರ್ನಾಟಕದಲ್ಲಿ ಎರಡೂ ಬ್ಲಾಕ್‌ಗಳಲ್ಲಿ ಶೇ. 60ಕ್ಕಿಂತ ಹೆಚ್ಚು ಮನೆಗಳು ಮನರೇಗಾ ಗ್ರಾಮದ ಒಟ್ಟಾರೆ ಅಭಿವೃದ್ಧಿಗೆ ಕೊಡುಗೆ ನೀಡಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಸಂಖ್ಯೆಯು ಇತರ ರಾಜ್ಯಗಳಲ್ಲಿ ಕಡಿಮೆ ಇದ್ದರೂ, ಉತ್ತಮವಾಗೇ ಇದೆ. ಮಧ್ಯಪ್ರದೇಶದಲ್ಲಿ ಶೇ. 40-60ರಷ್ಟು, ಮಹಾರಾಷ್ಟ್ರದಲ್ಲಿ ಶೇ. 20-40ರಷ್ಟು ಹಾಗೂ ಬಿಹಾರದಲ್ಲಿ ಶೇ. 20-30ರಷ್ಟು ಮನೆಗಳು ಗ್ರಾಮಗಳ ಅಭಿವೃದ್ಧಿಗೆ ಮನರೇಗಾದ ಕೊಡುಗೆ ಬಗ್ಗೆ ಸಕಾರಾತ್ಮಕ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

- ಸಮೀಕ್ಷೆ ನಡೆಸಲಾದ ಪ್ರತೀ ಬ್ಲಾಕ್‌ನಲ್ಲೂ, ಕಾರ್ಯಕ್ರಮದ ಸಕಾರಾತ್ಮಕ ವಿಚಾರಗಳ ಬಗ್ಗೆ ಪ್ರಶ್ನಿಸಿದಾಗ ವಲಸೆ ಹೋಗಬೇಕಾದ ಅಗತ್ಯ ಬಾರದೆ ಇರುವುದನ್ನೇ ಉಲ್ಲೇಖಿಸಲಾಗಿದೆ.

- ಕಾರ್ಯಕ್ರಮದ ಜನಪ್ರಿಯತೆಯ ಬಗ್ಗೆ ಪರಿಶೀಲಿಸಿದರೆ, ಪ್ರತೀ ಬ್ಲಾಕ್‌ನಲ್ಲಿ ಪ್ರತೀ ಮನೆಯ ಬದಲಾಗಿ ಪ್ರತೀ ವ್ಯಕ್ತಿಗೂ ನೂರು ದಿನಗಳ ಕೆಲಸ ಸಿಗಬೇಕು ಎಂದು ಶಿಫಾರಸು ಮಾಡಲಾಗಿದೆ. ಬೀದರ್ ಮತ್ತು ಘಾಟಿಗಾಂವ್‌ನಲ್ಲಿ ಶೇ 100ರಷ್ಟು ಮಂದಿ ಈ ಬಗ್ಗೆ ಶಿಫಾರಸು ಮಾಡಿರುವುದು ಮನರೇಗಾದ ದೊಡ್ಡ ಮಟ್ಟಿಗಿನ ಜನಪ್ರಿಯತೆಗೆ ಸಾಕ್ಷಿಯಾಗಿದೆ.

## ಪೂರೈಸದ ಬೇಡಿಕೆ

- ಬಹುಪಾಲು ಮನೆಗಳು ಮನರೇಗಾ ಕೆಲಸ ಸಿಕ್ಕರೂ ಪಡಿತರ ಸಮಸ್ಯೆಯನ್ನು ಎದುರಿಸಿದ್ದಾರೆ. ಕೋವಿಡ್ ವರ್ಷದಲ್ಲಿ ತಮಗೆ ಬೇಕಾದಷ್ಟು ಕೆಲಸಗಳನ್ನು ಪಡೆಯಲು ಅವರಿಗೆ ಸಾಧ್ಯವಾಗಿರಲಿಲ್ಲ. ಎಲ್ಲಾ ಬ್ಲಾಕ್‌ಗಳಲ್ಲಿ ಶೇ 39ರಷ್ಟು ಉದ್ಯೋಗ ಕಾರ್ಡ್ ಹೊಂದಿರುವ ಮನೆಗಳು ಕೋವಿಡ್ ವರ್ಷದಲ್ಲಿ ಮನರೇಗಾ ಕೆಲಸ ಮಾಡಲು ಆಸಕ್ತಿ ಹೊಂದಿದ್ದರು. ಆದರೆ ಒಂದು ದಿನವೂ ಅವರಿಗೆ ಕೆಲಸ ಸಿಕ್ಕಿರಲಿಲ್ಲ.

- ಸರಾಸರಿ ಅಂತಹ ಮನೆಗಳು ಕನಿಷ್ಠ 77 ದಿನಗಳ ಮನರೇಗಾ ಕೆಲಸಗಳನ್ನು ವರ್ಷಕ್ಕೆ ಸಿಕ್ಕಿದ್ದರೆ ಸಾಕು ಎಂದುಕೊಂಡಿದ್ದರು. ಮಹಾರಾಷ್ಟ್ರದ ವಾದ್ರಾದಲ್ಲಿ ಅತ್ಯಧಿಕ ಸರಾಸರಿ 92 ದಿನಗಳ ಮನರೇಗಾ ಕೆಲಸದ ಅಗತ್ಯವಿತ್ತು ಎಂದು ಕಾರ್ಮಿಕರು ಹೇಳಿದ್ದಾರೆ.

- ಕೋವಿಡ್ ವರ್ಷದಲ್ಲಿ ಕನಿಷ್ಠ ಒಂದು ದಿನ ಕೆಲಸ ಮಾಡಿದ ಮನೆಗಳು ಎಲ್ಲಾ ಬ್ಲಾಕ್‌ಗಳಲ್ಲೂ ಸರಾಸರಿ 64 ದಿನಗಳ ಕೆಲಸದ ನಿರೀಕ್ಷೆಯಲ್ಲಿದ್ದರು. ಆದರೆ ಅವರ ಈ ಬೇಡಿಕೆ ಈಡೇರಿರಲಿಲ್ಲ.

- ಕೋವಿಡ್ ವರ್ಷದಲ್ಲಿ ಮನರೇಗಾ ಅಡಿಯಲ್ಲಿ ಕೆಲಸ ಮಾಡಿದ್ದ ಮನೆಗಳು ಕೂಡ ನಿರೀಕ್ಷೆಯಿಟ್ಟಿದ್ದ 75 ದಿನಗಳಷ್ಟು ಕೆಲಸಗಳನ್ನು ಪಡೆಯಲು ಸಾಧ್ಯವಾಗಿಲ್ಲ. ಬಿಹಾರದ ಎರಡೂ ಬ್ಲಾಕ್‌ಗಳಲ್ಲಿ ಮತ್ತು ಹೆಚ್ಚು ಮನರೇಗಾ ಕೆಲಸವಿರದೆ ಇದ್ದ ಕರ್ನಾಟಕದ ಬೀದರ್ ಹಾಗೂ ಮಧ್ಯಪ್ರದೇಶದ ಖಾಲ್ವಾದಲ್ಲಿ 75 ದಿನಗಳಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಬಯಸಿದ್ದರು. ಮಹಾರಾಷ್ಟ್ರದ ವಾದ್ರಾದಲ್ಲಿ (ಹೆಚ್ಚು

ಉತ್ತಮ ಮನರೇಗಾ ಕೆಲಸವಿರುವ ಪ್ರದೇಶ) 70 ದಿನಗಳ ಕೆಲಸ ಬಯಸಿದ್ದರು. ಉಳಿದ ಬ್ಲಾಕ್‌ಗಳಲ್ಲಿ ಕನಿಷ್ಠ 50ರಿಂದ 60 ದಿನಗಳ ಕೆಲಸ ಸಿಗುವ ಭರವಸೆಯಲ್ಲಿದ್ದರು.

- ಎಂಐಎಸ್ ವಿಚಾರಕ್ಕೆ ಬಂದರೆ, ಕೋವಿಡ್ ವರ್ಷದಲ್ಲಿ ಸಮೀಕ್ಷೆ ನಡೆಸಿದ ಬ್ಲಾಕ್‌ಗಳಲ್ಲಿ ಒಟ್ಟು ರೂ 152.68 ಕೋಟಿಗಳಷ್ಟು ಹಣ ವ್ಯಯಿಸಲಾಗಿತ್ತು. ಈ ಬ್ಲಾಕ್‌ಗಳಲ್ಲಿ ಕೆಲಸದ ಪೂರ್ಣ ಬೇಡಿಕೆಯನ್ನು ಈಡೇರಿಸುವ ಭರವಸೆ ಇತ್ತು. ಹಂಚಿಕೆಯಾಗಿರುವ ಕಾರ್ಮಿಕ ಬಜೆಟ್ ರೂ 474.27 ಕೋಟಿಗಳಾಗಿವೆ. ವೇತನಗಳಲ್ಲಿ ನಿಜವಾಗಿಯೂ ಹಂಚಿಕೆಯಾದ ಮೊತ್ತಕ್ಕಿಂತ 3 ಪಟ್ಟು ಹೆಚ್ಚು ಬಜೆಟ್ ಇದಾಗಿದೆ.

- ಅಗತ್ಯವಿದ್ದಷ್ಟು ಕೆಲಸ ಸಿಗದೆ ಇರಲು ಅತಿ ಸಾಮಾನ್ಯವಾಗಿ ನೀಡಲಾಗುವ ಕಾರಣಗಳೆಂದರೆ ಎಲ್ಲಾ ಬ್ಲಾಕ್‌ಗಳಲ್ಲಿ ಸಾಕಷ್ಟು ಕೆಲಸಗಳನ್ನು ಮಂಜೂರು ಮಾಡಲಾಗಿಲ್ಲ/ ತೆರೆಯಲಾಗಿಲ್ಲ. ಸರಾಸರಿ ಶೇ 63ರಷ್ಟು ಎಲ್ಲಾ ಉದ್ಯೋಗ ಕಾರ್ಡ್ ಹೊಮದಿರುವ ಮನೆಗಳು ಸಮೀಕ್ಷೆ ನಡೆಸಿದ ಬ್ಲಾಕ್‌ಗಳಲ್ಲಿ ಇದೇ ಕಾರಣ ಸೂಚಿಸಿದ್ದಾರೆ.

- ಎಂಟು ಬ್ಲಾಕ್‌ಗಳಲ್ಲಿ ಐದರಲ್ಲಿ ಮುಂದಿಡಲಾಗಿರುವ ಎರಡನೇ ಅತಿದೊಡ್ಡ ಕಾರಣವೆಂದರೆ 'ಕಾಂಟ್ರಾಕ್ಟರ್ ಮಾಹಿತಿ ನೀಡಿಲ್ಲ' ಎನ್ನುವುದಾಗಿದೆ. ಕಾಯ್ದೆಯ ಪ್ರಕಾರ ಕಾಂಟ್ರಾಕ್ಟರ್‌ಗಳನ್ನು (ಗುತ್ತಿಗೆದಾರರು) ಮನರೇಗಾದಿಂದ ನಿಷೇಧಿಸಲಾಗಿತ್ತು. ಆದರೆ ಮುಖ್ಯವಾಗಿ ಕರ್ನಾಟಕದ ಎರಡು ಬ್ಲಾಕ್‌ಗಳಲ್ಲಿ ಕಾಂಟ್ರಾಕ್ಟರ್‌ಗಳ ಪ್ರಾಬಲ್ಯ ಹೆಚ್ಚಾಗಿರುವುದರಿಂದಲೇ ಕೆಲಸ ಕಡಿಮೆಯಾಗಿದೆ ಎಂದು ಸುಮಾರು ಅರ್ಧದಿಂದ ಮೂರನೇ ಎರಡಷ್ಟು ಮನೆಗಳು ಕಾರಣ ನೀಡಿರುವುದು ಅಧ್ಯಯನದಲ್ಲಿ ತಿಳಿದುಕೊಳ್ಳಲಾಗಿದೆ. ಮತ್ತು ಬಿಹಾರದ ಫುಲ್‌ಪರಸ್‌ನಂತಹ ಮನರೇಗಾ ಹೆಚ್ಚು ಸಕ್ರಿಯವಾಗಿಲ್ಲದ ಕಡೆ ಸುಮಾರು ಅರ್ಧದಷ್ಟು ಮನೆಗಳು ಕಾಂಟ್ರಾಕ್ಟರ್‌ಗಳು ತಮಗೆ ಕೆಲಸದ ಮಾಹಿತಿ ನೀಡದ ಕಾರಣ ಸಾಕಷ್ಟು ಕೆಲಸ ಸಿಕ್ಕಿಲ್ಲ ಎಂದು ಹೇಳಿದ್ದಾರೆ.

## ವೇತನ ಪಾವತಿ ವಿಳಂಬಗಳು

- ಕೋವಿಡ್ ವರ್ಷದಲ್ಲಿ ಕೆಲಸ ಮಾಡಿದ ಎಲ್ಲಾ ಮನೆಗಳಲ್ಲಿ ಸರಾಸರಿ ಶೇ. 36ರಷ್ಟು 15 ದಿನಗಳ ಒಳಗೆ ವೇತನ ಪಡೆದಿರುವುದಾಗಿ ಹೇಳಿದ್ದಾರೆ. ಇದು ಅಂದಾಜಿಸಲಾದ ಸರಾಸರಿ ಮತ್ತು ಎಲ್ಲಾ ಸಮೀಕ್ಷೆ ನಡೆಸಿದ ಬ್ಲಾಕ್‌ಗಳನ್ನೂ ಪ್ರತಿನಿಧಿಸಿದೆ.

- ಕರ್ನಾಟಕ ಮತ್ತು ಮಹಾರಾಷ್ಟ್ರದ ಅಧಿಕ ಕಾರ್ಯನಿರ್ವಹಿಸುವ ಬ್ಲಾಕ್‌ಗಳಲ್ಲಿ ಸಮಯಕ್ಕೆ ಸರಿಯಾಗಿ ವೇತನ ನೀಡಿರುವ ವಿಚಾರದಲ್ಲಿ ಅತ್ಯಧಿಕ ಸಕಾರಾತ್ಮಕ ಅನುಭವವಾಗಿದೆ. ಆದರೆ, ಅಲ್ಲಿಯೂ ಅರ್ಧಕ್ಕಿಂತಲೂ ಸ್ವಲ್ಪ ಕಡಿಮೆ ಮನೆಗಳು ಮಾತ್ರ ಮನರೇಗಾದ ನಿಯಮದಂತೆ 15 ದಿನಗಳ ಅವಧಿಯೊಳಗೆ ವೇತನ ನೀಡಿರುವ ಬಗ್ಗೆ ಹೇಳಿಕೊಂಡಿದ್ದಾರೆ.

- ಮಧ್ಯಪ್ರದೇಶದ ಎರಡೂ ಬ್ಲಾಕ್‌ಗಳಲ್ಲಿ ಈ ಪರಿಸ್ಥಿತಿ ಇನ್ನಷ್ಟು ಕಷ್ಟಕರವಾಗಿತ್ತು. ಅಲ್ಲಿ ಕೋವಿಡ್ ವರ್ಷದಲ್ಲಿ ಶೇ. 1ರಷ್ಟು ಮನೆಗಳು ಮಾತ್ರವೇ 15 ದಿನಗಳ ಒಳಗೆ ವೇತನ ಪಡೆದುಕೊಂಡಿದ್ದರು. ಬಿಹಾರದಂತಹ ಮನರೇಗಾ ಹೆಚ್ಚು ಯಶಸ್ಸು ಪಡೆದಿರುವ ಪ್ರದೇಶಗಳಲ್ಲಿ ಶೇ .15ರಷ್ಟು ಮನೆಗಳು ಮಾತ್ರ 15 ದಿನಗಳ ಒಳಗೆ ವೇತನ ಪಡೆದುಕೊಂಡಿದ್ದರು.

**ಸುರಕ್ಷಾ ಜಾಲ ಎಷ್ಟು ಪರಿಣಾಮಕಾರಿ?**

- ಮೇಲೆ ಹೇಳಲಾದ ಬೇಡಿಕೆ ಈಡೇರದೆ ಇರುವ ಸಮಸ್ಯೆಗಳ ನಡುವೆಯೂ ಸಮೀಕ್ಷೆ ನಡೆಸಿರುವ ಎಲ್ಲಾ ಬ್ಲಾಕ್‌ಗಳಲ್ಲೂ ಮನೆಗಳ ಆದಾಯದಲ್ಲಿ (ವಲಸಿಗರ ಆದಾಯ ಹೊರತುಪಡಿಸಿ) ಮನರೇಗಾದ ಗಳಿಕೆಯು ಅತ್ಯುತ್ತಮ ಪಾಲು ಹೊಂದಿರುವುದು ಕಂಡುಬಂದಿದೆ. ಬೀದರ್‌ನಲ್ಲಿ ಅತಿ ಕಡಿಮೆ ಶೇ. 6ರಿಂದ ಫುಲ್‌ಪರಸ್‌ನಲ್ಲಿ ಅತ್ಯಧಿಕ ಶೇ 47ರವರೆಗೆ ಇದು ವ್ಯಾಪಿಸಿದೆ. ಕೋವಿಡ್ ಸಂದರ್ಭದಲ್ಲಿ ವಾರ್ಧಾ ಹೊರತಾಗಿ ಉಳಿದೆಲ್ಲ ಬ್ಲಾಕ್‌ಗಳಲ್ಲಿ ಈ ಪ್ರಮಾಣ ಹೆಚ್ಚಾಗಿತ್ತು.

- ನಮ್ಮ ಅಂದಾಜಿನ ಪ್ರಕಾರ ಎರಡೂ ಅವಧಿಯಲ್ಲಿ (ಕೋವಿಡ್ ಪೂರ್ವದಲ್ಲಿ ಮತ್ತು ಕೋವಿಡ್ ಸಂದರ್ಭದಲ್ಲಿ) ಕೆಲಸ ಗಳಿಸಿದ ಮನೆಗಳು, ಮನರೇಗಾದಿಂದ ಗಳಿಕೆ ಹೆಚ್ಚಿಸಿಕೊಳ್ಳಲು ಸಾಧ್ಯವಾಗಿದೆ. ತಮ್ಮ ಆದಾಯ ನಷ್ಟಕ್ಕೆ ಬ್ಲಾಕ್‌ಗಳಲ್ಲಿ ಶೇ. 20ರಿಂದ ಶೇ 80ರಷ್ಟು ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿದೆ. ಕಾಲ್ವಾ ಈ ನಿಟ್ಟಿನಲ್ಲಿ (ಶೇ. 80) ಅತ್ಯುತ್ತಮ ಕಾರ್ಯ ಪ್ರದರ್ಶಿಸಿದೆ. ಇದಕ್ಕೆ ಎಂಐಎಸ್ ದತ್ತಾಂಶವೂ ಬೆಂಬಲಿಸಿದೆ.ಕೋವಿಡ್ ಸಂದರ್ಭದಲ್ಲಿ ಕಾಲ್ವಾದಲ್ಲಿ ಮನರೇಗಾ ಕೆಲಸ ಸಿಕ್ಕಿರುವ ಮನೆಗಳು ಮತ್ತು ವ್ಯಕ್ತಿಗಳ ಸಂಖ್ಯೆ ಉಳಿದೆಲ್ಲಾ ಬ್ಲಾಕ್‌ಗಳಿಗಿಂತ ಹೆಚ್ಚಾಗಿತ್ತು.

- ಕೋವಿಡ್ ಪೂರ್ವದಲ್ಲಿ ಕೆಲಸ ಮಾಡದೆ ಇದ್ದ ಮನೆಗಳು ಮತ್ತು ಕೋವಿಡ್ ಸಂದರ್ಭದಲ್ಲಿ ಮನರೇಗಾ ಕೆಲಸ ಪಡೆದುಕೊಂಡಿರುವ ಮನೆಗಳಲ್ಲಿ, ಮನರೇಗಾ ಗಳಿಕೆಯು ಅವರು ಇತರ ಸಂಪನ್ಮೂಲಗಳಿಂದ ಕಳೆದುಕೊಂಡಿದ್ದ ಆದಾಯ ನಷ್ಟವನ್ನು ಶೇ. 20ರಿಂದ ಶೇ. 100ರಷ್ಟು ಪರಿಹಾರ ಕಂಡುಕೊಳ್ಳಲು ನೆರವಾಗಿದೆ.

- ಕಡಿಮೆ ವೇತನಗಳು ಮತ್ತು ವೇತನ ಪಾವತಿಯಲ್ಲಿ ವಿಳಂಬದ ನಡುವೆಯೂ, ಮನರೇಗಾ ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ವ್ಯತ್ಯಾಸ ತರುವಲ್ಲಿ ಯಶಸ್ವಿಯಾಗಿದೆ. ಗ್ರಾಮೀಣ ಭಾರತದ ಕೆಲವು ಅತಿ ಬಡವರ್ಗದ ಮನೆಗಳ ಆದಾಯ ನಷ್ಟಕ್ಕೆ ಪರಿಹಾರ ಕೊಡುವಲ್ಲಿ ಯಶಸ್ಸು ಸಾಧಿಸಿದೆ. ಆದರೆ ಮನೆಗಳ ಪೂರ್ಣ ಬೇಡಿಕೆ ತಲುಪದೆ ಇರುವುದು ಅಥವಾ ಮನರೇಗಾ ಅಡಿ ಅವರಿಗೆ ಕೆಲಸ ಕೊಡುವುದರಿಂದ ಸಂಪೂರ್ಣ ಹೊರಗಿಟ್ಟಿರುವ ಕಾರಣ ಮನೆಗಳನ್ನು ಪೂರ್ಣವಾಗಿ ರಕ್ಷಿಸುವಲ್ಲಿ ವಿಫಲವಾಗಿದೆ. ಇದರು ಮನರೇಗಾವನ್ನು ಇನ್ನಷ್ಟು ವಿಸ್ತರಿಸುವ ಅಗತ್ಯವನ್ನು ಒತ್ತಿ ಹೇಳಿದೆ.

## ಪರಿಣಾಮಗಳು ಮತ್ತು ಶಿಫಾರಸುಗಳು

- ಅಧ್ಯಯನವನ್ನು ಆಧರಿಸಿ ಈ ಕೆಳಗಿನ ಹೆಜ್ಜೆಗಳನ್ನು ನಾವು ಶಿಫಾರಸು ಮಾಡುತ್ತೇವೆ.

- ಹೆಚ್ಚಿನ ಕೆಲಸದ ಬೇಡಿಕೆಯನ್ನು ಪೂರೈಸಲು ಕನಿಷ್ಠ ಕ್ಷೇತ್ರದ ಕಾರ್ಯಕಾರಿಗಳನ್ನು ದುಪ್ಪಟ್ಟುಗೊಳಿಸುವ ಮೂಲಕ ಆಡಳಿತ ಸಿಬ್ಬಂದಿಯ ಸಂಖ್ಯೆಯನ್ನು ಏರಿಸಬೇಕು. ಇದು ಭ್ರಷ್ಟಾಚಾರವನ್ನು ಕಡಿಮೆಗೊಳಿಸಬಹುದು.

- ಮಂಜೂರಾದ ಕೆಲಸಗಳ ವ್ಯಾಪ್ತಿ ಮತ್ತು ಬಾಳಿಕೆಯನ್ನು ಹೆಚ್ಚಿಸಿ ಮತ್ತು ವೈಯಕ್ತಿಕ ಆಸ್ತಿ ಸೃಷ್ಟಿಗೆ ಬದಲಾಗಿ ಸಮುದಾಯ ಕೆಲಸಗಳಿಗೆ ಆದ್ಯತೆ ನೀಡುವ ಮೂಲಕ ಹೆಚ್ಚು ಬೇಡಿಕೆಗಳನ್ನು ಈಡೇರಿಸಲು ಸಾಧ್ಯವಾಗಲಿದೆ.

- ಬೇಡಿಕೆ ಇಟ್ಟಿರುವ ಕೆಲಸಕ್ಕಾಗಿ ಕಾರ್ಮಿಕರಿಗೆ ಕಂಪ್ಯೂಟರೀಕೃತ ರಶೀದಿಗಳನ್ನು ನೀಡಿರುವುದನ್ನು ಖಚಿತಪಡಿಸಿ.

- ಮನರೇಗದಲ್ಲಿ ತಮ್ಮದೇ ಮಾಹಿತುನ್ನು ಪಡೆದುಕೊಳ್ಳಲು ಉದ್ಯೋಗ ಕಾರ್ಡ್‌ಗಳು ಕಾರ್ಮಿಕರ ಬಳಿ ಇರುವ ಏಕೈಕ ದಾಖಲೆಯಾಗಿದೆ. ಉದ್ಯೋಗ ಕಾರ್ಡ್‌ಗಳನ್ನು ಕೆಲಸದ ವಿವರ, ಗಳಿಸಿದ ವೇತನ ಇತ್ಯಾದಿಗಳ ಮಾಹಿತಿಯಿಂದ ಅಪ್‌ಡೇಟ್ ಮಾಡಬೇಕಿದೆ. ಕೈಯಿಂದ ಮಾಹಿತಿಯನ್ನು ಜಾಬ್ ಕಾರ್ಡ್‌ಗಳ ಮೇಲೆ ಅಪ್‌ಡೇಟ್ ಮಾಡುವ ಜೊತೆಗೆ ಬ್ಯಾಂಕ್‌ಗಳಲ್ಲಿ ಪಾಸ್‌ಬುಕ್‌ಗಳಲ್ಲಿ ಅಪ್‌ಡೇಟ್ ಸೌಲಭ್ಯಗಳಿರುವಂತೆ ಪಂಚಾಯತ್‌ಗಳು ಜಾಬ್ ಕಾರ್ಡ್‌ಗಳ ಮೇಲೆ ಮುದ್ರಣದ ಮೂಲಕ ವಿವರ ಬರೆಯುವ ಸೌಲಭ್ಯ ಒದಗಿಸಬೇಕು.

- ಕೇಂದ್ರ ಸರ್ಕಾರವು ವೇತನ ಪಾವತಿಯಲ್ಲಿನ ವಿಳಂಬದ ಸಂದರ್ಭದಲ್ಲಿ ಪೂರ್ಣ ಪ್ರಮಾಣದಲ್ಲಿ ಪರಿಹಾರ ಪಾವತಿಸುವುದನ್ನು ಖಚಿತಪಡಿಸಬೇಕು. ಅಂದರೆ, ಕಾಯ್ದೆಯ ಅನುಸಾರವಾಗಿ ಮತ್ತು ಸುಪ್ರೀಂಕೋರ್ಟ್ ಆದೇಶದಂತೆ ಕಾರ್ಮಿಕರ ಖಾತೆಗೆ ವೇತನಗಳನ್ನು ಪಾವತಿಸಬೇಕಿದೆ.

- ಕಾರ್ಮಿಕರಿಗೆ ವೇತನ ಸ್ಲಿಪ್‌ಗಳ ಹಂಚಿಕೆಗೆ ಸಂಬಂಧಿಸಿದ ದಿನಾಂಕ 2018 31ರ ಸರ್ಕಾರದ ಸುತ್ತೋಲೆಯಾಗಿರುವ ಆರ್‌ಇ-ಐ(360078)ಯನ್ನು ಅನುಷ್ಠಾನಕ್ಕೆ ತರಬೇಕಿದೆ. ಅಂತಹ ವೇತನ ಸ್ಲಿಪ್‌ಗಳನ್ನು NREGAsoft (ನರೇಗಾಸಾಫ್ಟ್) ಮೂಲಕ ಸಿದ್ಧಪಡಿಸಬೇಕು ಮತ್ತು ಎಂಐಎಸ್‌ನಿಂದಲೂ ಡೌನ್‌ಲೋಡ್ ಮಾಡಬಹುದಾದಂತೆ ಇರಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಕಾರ್ಮಿಕರಿಗೆ ವೇತನ ಸ್ಲಿಪ್‌ಗಳನ್ನು ವಿತರಿಸುವುದು ಗ್ರಾಮ ರೋಜ್‌ಗಾರ್ ಸೇವಕ್‌ನ ಜವಾಬ್ದಾರಿಯಾಗಿದೆ. ಉದಾಹರಣೆಗೆ, ಕಾರ್ಯಸ್ಥಳದಲ್ಲಿ, ಪಂಚಾಯತ್ ಭವನ, ಗ್ರಾಮ ಸಭೆಗಳಲ್ಲಿ ಇದನ್ನು ನೀಡಬೇಕು.

- ವೇತನ ಸ್ಲಿಪ್‌ಗಳಲ್ಲಿ ಕನಿಷ್ಠ ಈ ಕೆಳಗಿನ ಮಾಹಿತಿಗಳು ಇರಬೇಕು: ಕಾರ್ಮಿಕರ ಹೆಸರು, ಕಾರ್ಮಿಕರ ಉದ್ಯೋಗ ಕಾರ್ಡ್ ಸಂಖ್ಯೆ, ಕೆಲಸ ನಡೆದ ಯೋಜನೆ, ಮಸ್ಟರ್ ರೋಲ್ ಸಂಖ್ಯೆ, ಮಸ್ಟರ್ ರೋಲ್ ಸ್ಟಾರ್ಟ್ ದಿನಾಂಕ ಮತ್ತು ಅಂತ್ಯದ ದಿನಾಂಕ, ಮಸ್ಟರ್ ರೋಲ್‌ನಲ್ಲಿ ಕೆಲಸ ಮಾಡಿದ ದಿನಗಳ ಸಂಖ್ಯೆ,

ಕಾರ್ಮಿಕರ ಖಾತೆಗೆ ಜಮೆಯಾದ ಮೊತ್ತ (ರೂ), ವೇತನಗಳು ಜಮೆಯಾಗಿರುವ ಬ್ಯಾಂಕ್ ಖಾತೆ ಸಂಖ್ಯೆ, ವೇತನ ಜಮೆಯಾಗಿರುವ ಬ್ಯಾಂಕ್ ಹೆಸರು ಮತ್ತು ಖಾತೆ ವಿವರಗಳು, ವೇತನ ಸ್ಲಿಪ್ ಸಿದ್ಧವಾದ ದಿನಾಂಕ, ವೇತನಗಳಿಗೆ ವೇತನ ದರದ ವಿವರ.

- ಮನರೇಗಾಕ್ಕೆ ಸಂಬಂಧಿಸಿ 'ನಿಮ್ಮ ಹಕ್ಕುಗಳನ್ನು ತಿಳಿಯಿರಿ( ಕೆವೈಆರ್) ಮತ್ತು ಬ್ಯಾಂಕಿಂಗ್ ಹಕ್ಕುಗಳನ್ನು ಸಾರ್ವಜನಿಕ ಸ್ಥಳಗಳಾದ ಪಂಚಾಯತ್ ಭವನಗಳಲ್ಲಿ ಪ್ರದರ್ಶಿಸಿ.

- ಪ್ರತೀ ಗ್ರಾಂ ಪಂಚಾಯತ್‌ನಲ್ಲಿ 7 ನೋಂದಣಿ ಪುಸ್ತಕಗಳನ್ನು ನಿಭಾಯಿಸಿರುವುದನ್ನು ಖಚಿತಪಡಿಸಿ. ಕಾರ್ಮಿಕರ ಅನುಭವ ಮತ್ತು ಎಂಐಎಸ್ ಮೇಲೆ ಮಾಹಿತಿಯ ನಡುವೆ ಸಮಾನತೆ ಇರುವುದನ್ನು ಇದರಿಂದ ಖಾತರಿಪಡಿಸಬಹುದು.

- ಮನರೇಗಾ ವೇತನ ದರಗಳನ್ನು ಕನಿಷ್ಠ ರಾಜ್ಯದ ಕನಿಷ್ಠ ವೇತನಗಳ ದರಕ್ಕೆ ಅಥವಾ ಪ್ರತೀ ದಿನ ರೂ 375ಕ್ಕೆ ಅನೂಪ್ ಸತ್ಪಾತಿ ಸಮಿತಿ ಶಿಫಾರಸು ಮಾಡಿರುವಂತೆ ನಿಗದಿಪಡಿಸಬೇಕು ಮತ್ತು ಸಿಪಿಐ- ಎಲ್ ಬದಲಾಗಿ ಸಿಪಿಐ-ಆರ್‌ನಲ್ಲಿ ಸೂಚ್ಯಂಕ ಮಾಡಿರಬೇಕು.

- ಮನರೇಗಾ ಯೋಜನೆಯನ್ನು 73ನೇ ಸಂವಿಧಾನಾತ್ಮಕ ತಿದ್ದುಪಡಿಯ ಪ್ರಕಾರ ಗ್ರಾಮ ಪಂಚಾಯತ್‌ಗಳಿಗೆ ಬಲ ನೀಡಲೆಂದು ತರಲಾಗಿದೆ. ಆದರೆ ಈಗಿನ ಎನ್‌ಇ-ಎಫ್‌ಎಂಗಳ ಮೂಲಕದ ಅನುದಾನದ ಹರಿವಿನ ವ್ಯವಸ್ಥೆಯು ಗ್ರಾಮ ಪಂಚಾಯತ್‌ಗಳ ಅಧಿಖಾರ ಮತ್ತು ಸ್ವಾಯತ್ತತೆಯನ್ನು ಕಡಿಮೆಗೊಳಿಸಿದೆ. ಗ್ರಾಮ ಪಂಚಾಯತ್‌ಗಳು ಮೊದಲೇ ಅನುದಾನ ಪಡೆದುಕೊಳ್ಳುವಂತೆ ಖಚಿತಪಡಿಸಿ ಹೆಚ್ಚು ಕೆಲಸಗಳು ಲಭ್ಯವಿರುವಂತೆ ಮಾಡಬೇಕು.

- ಬ್ಯಾಂಕ್‌ಗಳ ಶಾಖೆಗಳ ಮೇಲೆ ಹೆಚ್ಚು ವಿಶ್ವಾಸವಿರಿಸಿ ಮತ್ತು ಹಣಕಾಸು ಒಳಗೊಳ್ಳುವಿಕೆಯನ್ನು ಹೆಚ್ಚಿಸುವ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಶಾಖೆಗಳನ್ನು ಹೆಚ್ಚಿಸುವ ಅಗತ್ಯವಿದೆ.

- ಸಾಮಾಜಿಕ ಲೆಕ್ಕ ಪರಿಶೋಧನೆ ಘಟಕಗಳು ಮನರೇಗಾ ಕಾರ್ಯಕ್ರಮದ ಹೇಗೆ ಕೆಲಸ ನಿರ್ವಹಿಸುತ್ತದೆ ಎನ್ನುವ ಮೂಲ ವಿಚಾರಗಳನ್ನು ಸುಧಾರಿಸಲು ಸಾಕಷ್ಟು ಸಾಮರ್ಥ್ಯ ಹೊಂದಿರಬೇಕು. ಆ ಮೂಲಕ ಕಾಂಟ್ರಾಕ್ಟರ್‌ಗಳು ಮನರೇಗಾವನ್ನು ದುರುಪಯೋಗಪಡಿಸಿಕೊಳ್ಳುತ್ತಿಲ್ಲ ಎಂದು ಖಚಿತಪಡಿಸಲು ಕಾರ್ಮಿಕರು ಬೇಡಿದ ಕೆಲಸಕ್ಕೆ ರಶೀದಿಗಳನ್ನು ಪಡೆಯುವುದನ್ನು ಖಚಿತಪಡಿಸಬೇಕು.

- ಮನರೇಗಾ ವೇತನ ಪಾವತಿಯಲ್ಲಿ ಒಳಗೊಂಡಿರುವ ಪ್ರತೀ ಏಜೆನ್ಸಿಯನ್ನು ಸಾಮಾಜಿಕ ಲೆಕ್ಕ ಪರಿಶೋಧನೆಯ ವ್ಯಾಪ್ತಿಯೊಳಗೆ ತರುವ ಮೂಲಕ ಉಲ್ಲಂಘನೆಯಾದಲ್ಲಿ ಸ್ಪಷ್ಟವಾದ ದಂಡದ ನಿಯಮಗಳನ್ನು ಹೇರಬೇಕು. ಹೆಚ್ಚುವರಿಯಾಗಿ ಗ್ರಾಮ ರೋಜ್‌ಗಾರ್ ಸಹಾಯಕ್ (ಜಿಆರ್‌ಎಸ್), ಕಿರಿಯ ಎಂಜಿನಿಯರ್, ಪ್ರೋಗ್ರಾಂ ಅಧಿಕಾರಿ ಮೊದಲಾದ ಕ್ಷೇತ್ರವಾರು ಕಾರ್ಯಕಾರಿಗಳಿಗೆ ಹೆಚ್ಚುವರಿಯಾಗಿ, ಈ ಕೆಳಗಿನ ಸಂಸ್ಥೆಗಳನ್ನೂ ಸಾಮಾಜಿಕ ಲೆಕ್ಕಪರಿಶೋಧನೆಯ ನಿಯಮಗಳ ಅಡಿಗೆ

ತರಬೇಕು: ಭಾರತೀಯ ರಾಷ್ಟ್ರೀಯ ಪಾವತಿ ಮಂಡಳಿ (ಎನ್‌ಪಿಸಿಐ), ಯುಐಡಿಐ, ಬ್ಯಾಂಕ್‌ಗಳು ಮತ್ತು ಬಿಸಿ/ ಸಿಎಸ್‌ಪಿಗಳು.